Primary Schools in Periyapatna Taluk.

755 SRI K. S. KALAMARI GOWDA(Periyapatna).—Will the Minister of State for Primary and Secondary Education be pleased to state:—

(a) the number of Primary Schools in Periyapatna taluk; and the required number of teachers to the said Schools;

(b) the number of Schools where the post of teachers are vacant and reasons therefor;

(c) the number of Urdu Schools in Periyapatna taluk and the number of teachers therein, number of posts of urdu teachers vacant in Urdu School and reason therefor?

SMT. NAGAMMA C. KESHAVAMURTHY (Minister of State for Primary and Secondary Education).—

(a) 208. Required number of teachers 429.

(b) 35 Transfer and retirement is the reason for it.

(c) Number of Urdu Schools in the taluk 21.
Number of teachers 44.

Number of vacant post of Urdu teachers in Urdu Schools-15
Transfer and retirement is the reason for it.

ಮನವಿಗಳು

ಶ್ರೀ ಸಿ.ಎಂ. ಇಬ್ರಾಹಿಂ.—ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಮೊನ್ನೆ ದಿವಸ ಪ್ರಸ್ತಾಪ ಮಾಡಿದ ಒಂದು ವಿಷಯವನ್ನು ನಿನ್ನೆ ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದೆ. ಅಧ್ಯಕ್ಷರು ಆ ವಿಷಯವನ್ನು ಕಡಿತದಿಂದ ತೆಗೆದು ಹಾಕಿದ್ದಾರೆ ಎನ್ನುತಕ್ಕಂಥಾದ್ದು ಅದು ಯಾವ ಥಾಟಿಯಲ್ಲಿ ಬಂದಿದೆ ಎಂದರೆ ಬಹುತೇಕವಾಗಿ ನಾವು ಸಮಾಜಕ್ಕೆ ಧರ್ಮಕ್ಕೆ ಬೈದು ಭಾಷಣ ಮಾಡಿದ್ದಾರೆ ಎನ್ನುವ ಭಾವನೆ ಜನಗಳಲ್ಲಿ ಬರುವ ಹಾಗೆ ಪ್ರಜಾವಾಣಿ ಪತ್ರಿಕೆಯಲ್ಲಿ ಆಚ್ಚಾಗಿದೆ. ಮತ್ತು ಅದರ ಕೆಳಗೆ ಬರೆದಿರುವ ವಿಷಯವನ್ನೂ ನೋಡಿದೆ. ಆದನ್ನು ಬರೆಯುವವರು ಬಹಳ ಬುದ್ಧಿವಂತಿಕೆಯಿಂದ ಬರೆಯುತ್ತಾರೆ ಅಲ್ಲದೆ ಅವರು ಜನ ನೋಡಿ ಬರೆಯುತ್ತಾರೆ. ಕೆಳಗಡೆ ಇರುವುದನ್ನು ಓದಿ ನೋಡಿದರೆ ಅದು ಅನ್‌ಪಾರ್ಲಿಮೆಂಟರಿ ಅಲ್ಲದಿದ್ದರೂ ಅದು ಸಭೆಗೆ ಸಭಿರುಚಿ ಇಲ್ಲದೇ ಹೋದುದ್ದರಿಂದ ತೆಗೆದು ಹಾಕಿದ್ದಾರೆ ಅಂತ ಕೆಳಗಡೆ ಕಾಲಂನಲ್ಲಿ ಅವರು ಹಾಕಿದ್ದಾರೆ. ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ೧೯೭೨ನೇ ಇಸವಿಯಿಂದಲೂ ಅನೇಕ ಜನ ಮಾನ್ಯ ಸದಸ್ಯರು ಮಾತನಾಡಿರತಕ್ಕಂಥಾ ಭಾಷಣ ಮತ್ತು ನಾನು ಮಾತನಾಡಿರತಕ್ಕಂಥಾ ಭಾಷಣ ತಾವು ಹೋಲಿಸಿ ನೋಡಿ. ಆದರಲ್ಲಿ ಯಾವುದಾದರೂ ಭಾಷಣ ನೋವಾಗಿರುವ ಹಾಗೆ ನಾನು ಮಾತನಾಡಿದ್ದರೆ ತಾವು ಹೇಳಿದಂತೆ ನಾನು ಒಪ್ಪಿಕೊಳ್ಳುತ್ತೇನೆ. ನಾನು ಪ್ರತ್ಯಕ್ಷವಾಗಿ ರಾಜ್ಯದಲ್ಲಿ ಏನು ನಡೆದಿದೆ ಅದನ್ನು ಮಾತ್ರ ಹೇಳಿದೆ. ಈವೊತ್ತಿನ ದಿವಸ ಅಲ್ಪಸಂಖ್ಯಾತರ, ಹರಿಜನರ ಮತ್ತು ಹಿಂದುಳಿದವರ ಸಮಾಜದ ಮೇಲೆ ಮತ್ತು ಈ ಸಮಾಜದ ಮಂತ್ರಿಗಳ ಮೇಲೆ ಸತತವಾಗಿ ಹಲ್ಲೆ ನಡೆಯುತ್ತಾ ಇದೆ ಅನ್ನುವುದರ ಬಗ್ಗೆ ನಾನು ಹೇಳಿದೆ.

ಶ್ರೀ ಪಿ. ರಾಮದೇವ್.—ಈಗ ತಾವು ಇದರ ಮೇಲೆ ರೂಲಿಂಗ್ ಕೊಟ್ಟಿದ್ದಾಗಿದೆ ಮತ್ತೆ ಮಾನ್ಯ ಸದಸ್ಯರು ಇದರ ಮೇಲೆ ಪ್ರಶ್ನೆ ಮಾಡತಕ್ಕಂಥಾದ್ದು ಕ್ರಮಬದ್ಧವಾದುದೇ?